ಹಿಂದಿ ಭಾಷಿಗ ಗುಂಡನ ಪ್ರಕಾರ ಪ್ರೀತಿಯ ವ್ಯಾಖ್ಯಾನ ಹೀಗಿತ್ತು: ಹುಡುಗನೋರ್ವನನ್ನು ಹುಡುಗಿ ತಾನಾಗಿ ಪ್ರೀತಿಸಿದರೆ ಅದು ಪ್ಯಾರ್, ಗೆಳೆಯರು ಯಾರಾದರೂ ಪರಿಚಯಿಸಿ ಪ್ರೀತಿಯುಂಟಾದರೆ ಅದು ಉಪಹಾರ್(ಕೊಡುಗೆ), ಮನೆಯವರು ಹುಡುಕಿ ಸಂಬಂಧ ಬೆಳೆಸಿದರೆ ಅದು ಸಂಸ್ಕಾರ್ ಮತ್ತು ಹುಡುಗ ತಾನೇ ಹುಡುಗಿಯನ್ನು ಪ್ರೀತಿಸಿ ಮದುವೆಯಾದರೆ ಮಾತ್ರ ಹಾಹಾಕಾರ್!

***

ಗುಂಡ ಸಪತ್ನೀಕನಾಗಿ ಹಾಲ್‌ನಲ್ಲಿ ಕೂತು ಲೋಕಾಭಿರಾಮದ ಮಾತಲ್ಲಿ ತೊಡಗಿದ್ದ. ಬೇಸಿಗೆಯಾದ್ದರಿಂದ ಆತನ ಪತ್ನಿ ಸೌತೆಕಾಯಿ ಸಿಪ್ಪೆ ಸುಲಿಯುತ್ತಿದ್ದಳು. ಗುಂಡನ ಮೊಬೈಲ್ ಅಡುಗೆ ಕೋಣೆಯಲ್ಲಿ ಚಾರ್ಜಿಂಗ್‌ಗೆ ಇಡಲಾಗಿದ್ದು, ವಾಟ್ಸ್‌ಆ್ಯಪ್ ಸಂದೇಶದ ಕರೆ ಕೇಳಿಸಿತು. ಗುಂಡ ಅಡುಗೆ ಕೋಣೆಗೆ ಹೋಗಿ ನೋಡಿದರೆ ಪತ್ನಿಯ ಸಂದೇಶ ಹೀಗಿತ್ತು, 'ಅಲ್ಲಿಂದ ಬರುವಾಗ ಒಂದು ಚಿಟಿಕೆ ಉಪ್ಪು ತೆಗೆದುಕೊಂಡು ಬನ್ನಿ'!

***

ಗುಂಡ ತನ್ನ ಬಾಲ್ಯಸ್ನೇಹಿತ ಪುಂಡನ ಜೊತೆಯಲ್ಲಿ ಕೂತು ಶರಾಬು ಸೇವಿಸಿದ ಬಳಿಕ ಸಿಗರೇಟಿನ ಹೊಗೆಬಿಟ್ಟು ಲೋಕಾಭಿರಾಮವಾಗಿ ಮಾತನಾಡುತ್ತಾ ಸ್ಯಾಚೆಟ್ ಹರಿದು ತಂಬಾಕು ಪುಡಿಯನ್ನು ಅಂಗೈಗೆ ಸುರಿದುಕೊಂಡ. ಬಳಿಕ ಅದನ್ನುಜ್ಜಿಕೊಂಡು ಬಾಯಿಗಿಡುತ್ತಾ ಕಾಳಜಿಪೂರ್ವಕವಾಗಿ ಹೇಳಿದ, 'ಯಾವತ್ತೂ ನೂಡಲ್ಸ್ ತಿನ್ನಬೇಡ ಮಾರಾಯ, ಅದರಲ್ಲಿ ಮೈದಾ ಇದೆ ಮತ್ತು ಮೈದಾ ದೇಹಕ್ಕೆ ಒಳ್ಳೆಯದಲ್ಲ'!

***




**ಪತ್ನಿಯ ಅತ್ಯಂತ ಅಪಾಯಕಾರಿ ಗುಣಗಳು:** ಅವಳು ಅರ್ಧ ಕೇಳುತ್ತಾಳೆ, ಅದರರ್ಧ ಅರ್ಥೈಸುತ್ತಾಳೆ, ಶೂನ್ಯ ಯೋಚಿಸುತ್ತಾಳೆ, ದುಪ್ಪಟ್ಟು ಪ್ರತಿಕ್ರಿಯಿಸುತ್ತಾಳೆ ಮತ್ತು ನೂರು ಪ್ರತಿಶತ ನೆನಪಿಟ್ಟುಕೊಳ್ಳುತ್ತಾಳೆ.

**ಪತಿಯ ಅತ್ಯಂತ ಅಪಾಯಕಾರಿ ಗುಣಗಳು:** ಅವನು ಏನೂ ಕೇಳಿಸಿಕೊಳ್ಳುವುದಿಲ್ಲ, ಎಲ್ಲವನ್ನೂ ಅರ್ಥೈಸುತ್ತಾನೆ, ದುಪ್ಪಟ್ಟು ಯೋಚಿಸುತ್ತಾನೆ, ಒಂದು ಪಟ್ಟು ಪ್ರತಿಕ್ರಿಯಿಸುತ್ತಾನೆ ಮತ್ತು ಪ್ರತಿಶತ ಶೂನ್ಯ ನೆನಪಿಟ್ಟುಕೊಳ್ಳುತ್ತಾನೆ!

***

ವಿದ್ಯಾರ್ಥಿ ಗುಂಡನಿಗೆ ರಸ್ತೆ ಸುರಕ್ಷೆಯ ಬಗ್ಗೆ ಸೂಚನಾಫಲಕವೊಂದನ್ನು ಬರೆಯಲು ಟೀಚರ್ ತಿಳಿಸಿದರು. ಗುಂಡ ಹೀಗೆ ಬರೆದ, 'ಜಾಗ್ರತೆಯಿಂದ ವಾಹನ ಚಾಲನೆ ಮಾಡಿರಿ. ಅಮಾಯಕ ವಿದ್ಯಾರ್ಥಿಗಳನ್ನು ಸಾಯಿಸದಿರಿ, ಟೀಚರ್‌ಗಳಿಗಾಗಿ ಕಾಯಿರಿ'.

***

ತತ್ವಜ್ಞಾನಿ ಗುಂಡ: ಜೊತೆಗೆ ಯಾರೂ ಇಲ್ಲದಿರುವಾಗ ಒಂದು ಸಣ್ಣ ರಸ್ತೆಯನ್ನು ಕ್ರಮಿಸುವುದೂ ತ್ರಾಸದಾಯಕವಾಗಿರುತ್ತದೆ. ಆದರೆ ಕಡಿದಾದ ದೊಡ್ಡ ರಸ್ತೆಯನ್ನೂ ಕೆಲವರು ಜೊತೆಗಿರುವಾಗ ಕೆಲವೇ ಹೆಜ್ಜೆಗಳಲ್ಲಿ ಕ್ರಮಿಸಬಹುದಾಗುತ್ತದೆ.

**ಪುಂಡ:** ಯಾರೋ ಅಂಥಾ ಸ್ಫೂರ್ತಿ ನೀಡುವವರು?

**ಗುಂಡ:** ಹಿಂದಿನಿಂದ ಅಟ್ಟಿಸಿಕೊಂಡು ಬರುವ ಬೀದಿನಾಯಿಗಳು...

***

**ವರದಿಗಾರ:** ಪೆಟ್ರೋಲ್ ಮತ್ತು ಮದ್ಯದ ಇತ್ತೀಚಿನ ಬೆಲೆಯೇರಿಕೆಯ ಬಗ್ಗೆ ನಿಮ್ಮ ಪ್ರತಿಕ್ರಿಯೆಯೇನು?

**ಗುಂಡ:** ಬೆಲೆ ಎಷ್ಟು ಬೇಕಾದರೂ ಏರಲಿ, ಎರಡನ್ನೂ ನಾನು 30ರಷ್ಟೇ ಹಾಕಿಸೋದು.

***

**ಗುಂಡ:** ವಯಸ್ಸಾಗುತ್ತಿದ್ದಂತೆ ಮನುಷ್ಯ ಪ್ರತಿದಿನ ಶ್ರೀಮಂತನಾಗುತ್ತಾನೆ.

**ಪುಂಡ:** ಅದು ಹೇಗೆ?

**ಗುಂಡ:** ಕೂದಲು ಬೆಳ್ಳಗಾಗುತ್ತದೆ. ಹಲ್ಲುಗಳು ಚಿನ್ನದ್ದಾಗುತ್ತವೆ, ರಕ್ತದಲ್ಲೇ ಸಕ್ಕರೆ ಸಿಗುತ್ತದೆ, ಕಣ್ಣುಗಳಲ್ಲಿ ಪೊರೆ ಬರುತ್ತದೆ ಮತ್ತು ಕಿಡ್ನಿಗಳಲ್ಲಿ ದುಬಾರಿ ಕಲ್ಲುಗಳು ಸಿಗಲಾರಂಭಿಸುತ್ತದೆ!

ಹಿಂದಿಯಿಂದ ಸಂಗ್ರಹ: **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

**ಮಂಡ:** ನೀನು ಜೈಲಿಗೆ ಹೋಗಲು ಕಾರಣವೇನು?

**ಗುಂಡ:** ಸ್ಪರ್ಧೆ.

**ಮಂಡ:** ಎಂಥಾ ಸ್ಪರ್ಧೆ?

**ಗುಂಡ:** ನೋಟುಗಳನ್ನು ಮುದ್ರಿಸುವ ಸ್ಪರ್ಧೆ.

**ಮಂಡ:** ಯಾರೊಂದಿಗೆ?

**ಗುಂಡ:** ಸರ್ಕಾರದೊಂದಿಗೆ. ಸರ್ಕಾರ ಮುದ್ರಿಸುವಂತಹ ನೋಟುಗಳನ್ನು ಜಿದ್ದಿಗೆ ಬಿದ್ದವನಂತೆ ನಾನೇ ಮುದ್ರಿಸಿದೆ.

***

**ಹೆಂಡತಿ:** ರೀ... ತಿಂಡಿಗೆ ಪಲಾವ್ ಮಾಡ್ಲಾ ಅಥವಾ ಚಿತ್ರಾನ್ನ ಮಾಡ್ಲಾ?

**ಗಂಡ:** ಮೊದಲು ಅಡುಗೆ ಮಾಡು. ಆಮೇಲೆ ಅದಕ್ಕೆ ಹೆಸರಿಡೋಣ.

***

**ಪ್ರೆಸ್ ರಿಪೋರ್ಟರ್:** ಭಿಕ್ಷುಕನಿಗೆ ಕೇಳಿದ ಪ್ರಶ್ನೆ, ಲಾಟರಿಯಲ್ಲಿ ನಿನಗೆ 10 ಲಕ್ಷ ಬಂದರೆ ಏನು ಮಾಡುವೆ?

**ಭಿಕ್ಷುಕ:** ಕಾರಲ್ಲಿ ಕುಳಿತು ಭಿಕ್ಷೆ ಬೇಡುವೆ!

***

**ಅಪ್ಪ:** ರಾತ್ರಿ ಹತ್ತು ಗಂಟೆ ಆಗಿದೆ. ಬೆಳಿಗ್ಗೆಯಿಂದ ಇಷ್ಟೊತ್ತಿನವರೆಗೆ ಎಲ್ಲಿಗೆ ಹೋಗಿದ್ದೆ?

**ಪವಿತ್ರಾ:** ಸಿಟಿ ಸೆಂಟರ್ ಮಾಲ್‌ಗೆ ಹೋಗಿದ್ದೆ.

**ಅಪ್ಪ:** ಏನ್ ತಗೊಂಡೆ?

**ಪವಿತ್ರಾ:** 2 ಹೇರ್ ಕ್ಲಿಪ್ ಮತ್ತು 50 ಸೆಲ್ಫಿ!

***

**ಹೆಂಡತಿ:** ರೀ... ಅಮ್ಮನಿಗೂ ಹೆಂಡತಿಗೂ ಏನು ವ್ಯತ್ಯಾಸ?

**ಗಂಡ:** ಅಮ್ಮ ಮಾತಾಡೋದು ಕಲಿಸುತ್ತಾಳೆ, ಹೆಂಡತಿ ಬಾಯಿ ಮುಚ್ಚೋದು ಕಲಿಸುತ್ತಾಳೆ.

***

**ಮೇಷ್ಟ್ರು:** ಬೀಜಗಣಿತ ಅಂದರೆ ಏನು?

**ಗುಂಡ:** ಹಣ್ಣನ್ನು ತಿಂದು ಅದರಲ್ಲಿರುವ ಬೀಜಗಳನ್ನು ಲೆಕ್ಕ ಹಾಕುವುದೇ ಬೀಜಗಣಿತ.

***

**ಗುಂಡ:** ಸುಂದರಿಯೂ, ಒಳ್ಳೆಯ ಗುಣವುಳ್ಳವಳೂ, ಬುದ್ಧಿವಂತಳೂ ಹೊಂದಿಕೊಂಡು ಹೋಗುವವಳು ಆಗಿರುವ ಹೆಂಡತಿಗೆ ಏನಂತಾರೆ ಸ್ವಾಮಿಗಳೇ?

**ಸ್ವಾಮೀಜಿ:** ಅದಕ್ಕೆ 'ಮನಸ್ಸಿನ ಭ್ರಮೆ' ಎನ್ನುತ್ತಾರೆ.

***

**ಹೆಂಡತಿ :** ರೀ... ನನ್ನ ಸ್ಕಿನ್ ತುಂಬಾ ಆಯ್ಲಿ ಆಗಿದೆ. ಏನು ಮಾಡಬೇಕು?

**ಗಂಡ:** ಇದು ತಗೋ ವಿಮ್ ಬಾರ್. ಇದು ಎಣ್ಣೆ ಜಿಡ್ಡನ್ನು ಪೂರ್ತಿ ತೊಳೆದುಬಿಡುತ್ತೆ.

***

**ಗುಂಡ:** ಮದುವೆಗೆ ಮುನ್ನ ವಧು ವರರು ಪರಸ್ಪರ ಕೈ ಹಿಡಿದುಕೊಂಡಿರುತ್ತಾರೆ. ಏಕೆ?

**ತಿಮ್ಮ:** ಇಬ್ಬರು ಬಾಕ್ಸರುಗಳು ಬಾಕ್ಸಿಂಗ್ ಆರಂಭಿಸುವ ಮುನ್ನ ಪರಸ್ಪರ ಕೈ ಹಿಡಿದುಕೊಳ್ಳುವುದು ಹಿಂದಿನಿಂದಲೂ ನಡೆದು ಬಂದ ರೂಢಿ, ಅದಕ್ಕೆ.

***

**ಡಾಕ್ಟರ್:** ಎಲ್ಲಿ ನೋವಾಗುತ್ತೆ?

**ಗುಂಡ:** ಫೀಸ್ ಕಮ್ಮಿ ಮಾಡೋದಾದ್ರೆ ಎಲ್ಲಿ ನೋಯ್ತಿದೆ ಅಂತ ಹೇಳ್ತೀನಿ. ಇಲ್ಲ ಅಂದ್ರೆ ನೀವೇ ಪತ್ತೆ ಮಾಡ್ಕೊಳ್ಳಿ.

***

**ಶಿಕ್ಷಕ:** ರೈಲ್ವೆ ಲೈನ್ ಮೇಲೆ ಅಲ್ಲಲ್ಲಿ ಗೇಟ್‌ಗಳನ್ನು ಏಕೆ ಕೂಡಿಸಿರುತ್ತಾರೆ?

**ಗುಂಡ:** ರೈಲು ನಗರದೊಳಗೆ ನುಗ್ಗಿ ಬರಬಾರದು ಎಂಬ ಉದ್ದೇಶದಿಂದ.

ಸಂಗ್ರಹ: **ಶರದ ಕುಲಕರ್ಣಿ, ಬೀದರ್**